ಎಂ.ವಿ.ಸಿಃ 527/2021
ಪಿ.ಡಬ್ಲ್ಯೂ : 03

ದಿನಾಂಕ 09-**06-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಮತಿ ಎ. ಎಸ್ ., ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಸಾಕ್ಷಿಗೆ ನಿಪಿ.19 ತೋರಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಸದ್ರಿ 19(ಎ) ಒಟ್ಟು 10 ದಾಖಲೆಗಳಿಗೂ ಅನ್ವಯವಾಗುತ್ತದೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎ. ಎಂ ವಕೀಲರಿಂದಃ**

ನಾನು ಬ್ಯಾಚುರಲ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗಿಕ್ ಸೈನ್ಸ್ ಓದಿರುತ್ತೇನೆ. ಈ ಪದವಿಯನ್ನು ನಾನು ಎಸ್ 3. ಎಂ ಉಜಿರೆ ಕಾಲೇಜಿನಲ್ಲಿ ಪಡೆದುಕೊಡಿರುತ್ತೇನೆ. ತೆರಪಿ ಬಗ್ಗೆ ನನಗೆ 30 ವರುಷಗಳಿಂದ ಅನುಭವ ಇದೆ. ಅರ್ಜಿದಾರರಿಗೆ ನಿಪಿ 19 ನಾನು ನೀಡಿದ ಪ್ರಮಾಣ ಪತ್ರಗಳು. ಹಣ ಪಡೆದ ಬಗ್ಗೆ ನಾನು ರಶೀದಿಗಳನ್ನು ನಾನು ನೀಡಿರುವುದಿಲ್ಲ. ನಾನು ವೈಯಕ್ತಿಕವಾಗಿ ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ನಾನು ಅರ್ಜಿದಾರರ ಮನೆಗೆ ಹೋಗಿ ಚಿಕಿತ್ಸೆ ನೀಡಿರುತ್ತೇನೆ. ಒಂದು ತಿಂಗಳ ಕಾಲ ಪ್ರತೀ ದಿನ ನಾನು ಮತ್ತು ನನ್ನ ಸಿಬ್ಬಂದಿ ಚಿಕಿತ್ಸೆ ಕೊಡುತ್ತಾ ಇದ್ದೆವು. ನಾನು ಕೆಎಂಸಿ ಆಸ್ಪತ್ರೆ ಯವರು ನಿಡಿದ ಬಿಡುಗಡೆ ಚೀಟಿಯನ್ನು ಓದಿರುತ್ತೇನೆ. ನಾನು ನೋಡುವಾಗ ಅವರಿಗೆ ಟ್ಯೂಬ್ ಮ್ಹೂಲಕ ಆಹಾರ ವನ್ನು ನೀಡುತ್ತಿದ್ದೆವು. ಆ ಸಮಯದಲ್ಲಿ ಅವರು ಕೋಮಾ ಸ್ಥಿತಿಯಲ್ಲಿ ಇದ್ದರು. ಅವರಿಗೆ ನಾನು ಹೇಳಿದ ಎಲ್ಲಾ ಫಿಸಿಯೋತೆರಪಿ ಮಾಡಲು ಆಗುವುದಿಲ್ಲ. ಈ ವಿಚಾರವನ್ನು ಅವರ ಸಂಬಂಧಿಕರಿಗೆ ಹೇಳಿರುತ್ತೇವೆ. ಅವರಿಗೆ ಆರೋಗ್ಯ ಸರಿ ಹೋಗಬೇಕೆಂದು ನಾವು ಚಿಕಿತ್ಸೆ ನೀಡುತ್ತಿದ್ದೆವು.

ನಾನು ಫೋನ್ ಮಾಡಿ ಅವರ ವೈದ್ಯರಿಗೆ ಈ ಸೂಚನೆಯನ್ನು ನೀಡಿದ್ದು ಅವರು ಫಿಸಿಯೋ ತೆರಪಿ ಮುಂದುವರಿಸಿ ಎಂದು ಹೇಳಿರುತ್ತಾರೆ. ಅವರಿಗೆ ಬ್ರೈನ್ ರಿಲೇಟೆಡ್ ಸಮಸ್ಯೆಗಳು ಇದ್ದವು. ಆ ಬಗ್ಗೆ ಅವರ ವೈದ್ಯರು ನೀಡಿದ ಔಷದಿಗಳನ್ನು ಮುಂದುವರಿಸುತ್ತಾ ಇದ್ದರು. ನಾನು ಚಿಕಿತ್ಸೆ ನೀಡಿದ ವ್ಯಕ್ತಿಗೆ 50-60 ವರ್ಷ ಆಗಿರಬಹುದು. ಪ್ರಮಾಣ ಪತ್ರಗಳನ್ನು ನಾನೇ ಟೈಪ್ ಮಾಡಿರುತ್ತೇನೆ. ನಿಪಿ 19 ರಲ್ಲಿ ಅವರ ಪ್ರಾಯ 64 ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಮನೆಗೆ ಹೋಗಿ ಚಿಕಿತ್ಸೆ ನೀಡಿದ ಕಾರಣ ಹಣ ಪಡೆದು ರಶೀದಿ ಪಡೆಯುವ ಪದ್ದತಿ ನಾನು ಇಟ್ಟು ಕೊಂಡಿಲ್ಲ. ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆಯಾದ 12 ದಿನಗಳ ನಂತರ ನಾನು ಅವರಿಗೆ ಫಿಸಿಯೋ ತೆರಪಿ ನೀಡಲು ಪ್ರಾರಂಬಿಸಿದೆ. ಅರ್ಜಿದಾರರ ಆರೋಗ್ಯ ಸ್ಥಿತಿ ತುಂಬಾ ಕೆಟ್ಟದಾಗಿತ್ತು. ಆ ನಂತರ ನಾನು ಫಿಸಿಯೋ ತೆರಪಿ ನಿಲ್ಲಿಸಿದ್ದೆ. ಅವರು ಖುದ್ದಾಗಿ ಕಾಲನ್ನು ಮಡಚಲು ಆಗುತ್ತಾ ಇರಲಿಲ್ಲ. ಅರ್ಜಿದಾರರು ಹೆಚ್ಚಿನ ಸಮಯ ಉಸಿರಾಟಕ್ಕೆ ಕೃತಕ ಆಕ್ಸಿಜನ್ ಬಳಸುತ್ತಿದ್ದರು. ಅರ್ಜಿದಾರರಿಗೆ ಕೃತಕ ಆಕ್ಸಿಜನ್ ಬಳಸುವ ಸಮಯದಲ್ಲಿ ಫಿಸಿಯೋತೆರಪಿ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿದಾರರು ಆ ಸಮಯದಲ್ಲಿ ತುಂಬಾ ಕಷ್ಟ ಪಟ್ಟು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಫಿಸಿಯೋತೆರಪಿ ಸಮಯದಲ್ಲಿ ಅವರಿಗೆ ಮೂತ್ರ ವಿಸರ್ಜನೆ ಪೈಪ್ ಮೂಲಕ ಆಗುತ್ತಿತ್ತು. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಪ್ರಮಾಣ ಪತ್ರ ನೀಡಿರುತ್ತೇನೆ. ಆ ಸ್ಥಿತಿಯಲ್ಲಿ ಇದ್ದ ಸಮಯದಲ್ಲಿ ಫಿಸಿಯೋತರೆಪಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಂ.ವಿ.ಸಿಃ 527/2021
ಪಿ.ಡಬ್ಲ್ಯೂ : 03

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.